# ಭಗವಂತನ ನೆಲೆ

**ಈಶ್ವರ** ತತ್ತ್ವಕ್ಕಾಗಿ ಹುಡುಕುತ್ತಿದ್ದರೆ ಅದನ್ನು ಮಾನವನಲ್ಲಿ ಹುಡುಕು. ಆತ ಮಾನವನಲ್ಲಿ ವಿಶೇಷವಾಗಿ ವ್ಯಕ್ತವಾಗಿದ್ದಾನೆ. ಯಾವ ಮನುಷ್ಯನಲ್ಲಿ ನೀನು ಊರ್ಜಿತ ಭಕ್ತಿಯನ್ನು, ಎಂದರೆ ಪ್ರೇಮ-ಭಕ್ತಿಯು ಉಕ್ಕಿ



ಹರಿಯುತ್ತಿರುವುದನ್ನು ನೋಡುವೆಯೋ, ಯಾರು ಆತನ ಪ್ರೇಮದಿಂದ ಮತ್ತನಾಗಿದ್ದಾನೋ ಆತನ ಮೂಲಕ ನಿಸ್ಸಂದೇಹವಾಗಿ ಭಗವಂತ ಅವರಿಸಿದ್ದಾನೆ ಎಂಬುದನ್ನು ತಿಳಿ.

*(ವಚನವೇದ, ಸಂ.೨, ಪು.೨೫೧)*



**ಕೇವಲ** ಸಚ್ಚಿದಾನಂದನೇ ಗುರು. ಮನುಷ್ಯ ಗುರುವಿನ ಪಟ್ಟ ಧರಿಸಿ ಜನರಲ್ಲಿ ಆತ್ಮಜಾಗೃತಿಯನ್ನುಂಟು ಮಾಡಿದ್ದೇ ಆದರೆ, ಆಗ ತಿಳಿದುಕೊಳ್ಳಬೇಕು, ಸಚ್ಚಿದಾನಂದನೇ ಆ ರೂಪ ಧರಿಸಿದ್ದಾನೆ ಎಂಬುದಾಗಿ. ಗುರು ಒಬ್ಬ ಸ್ನೇಹಿತ ಇದ್ದ ಹಾಗೆ. ಆತ ಕೈಹಿಡಿದು ಕರೆದುಕೊಂಡು ಹೋಗುತ್ತಾನೆ. ಭಗವಂತನ ದರ್ಶನವಾದ ನಂತರ ಗುರು-ಶಿಷ್ಯರ ಭೇದವಿರದು.

*(ವಚನವೇದ, ಸಂ.೧, ಪು.೧೮೪)*


**ಬ್ರಹ್ಮ** ಏನು ಎಂಬುದನ್ನು ಬಾಯಿಯಿಂದ ವರ್ಣನೆ ಮಾಡಲಾಗುವುದಿಲ್ಲ. ಎಲ್ಲವೂ ಉಚ್ಛಿಷ್ಟವಾಗಿ ಹೋಗಿವೆ — ವೇದ, ಪುರಾಣ, ತಂತ್ರ, ಷಡ್ದರ್ಶನ ಎಲ್ಲಾ. ಇವೆಲ್ಲಾ ಬಾಯಿಯಿಂದ ಹೊರಹೊಮ್ಮಿರುವುದರಿಂದ, ನಾಲಗೆ ಉಚ್ಚರಿಸಿರುವುದರಿಂದ ಉಚ್ಛಿಷ್ಟವಾಗಿವೆ. ಆದರೆ ಕೇವಲ ಒಂದು ವಸ್ತು ಮಾತ್ರ ಉಚ್ಛಿಷ್ಟವಾಗಿಲ್ಲ, ಅದೇ ಬ್ರಹ್ಮ. ಬ್ರಹ್ಮ ಎಂದರೆ ಏನು ಎಂಬುದನ್ನು ಯಾರಿಗೂ ಇದುವರೆಗೆ ವರ್ಣನೆ ಮಾಡಲಾಗಿಲ್ಲ. *(ವಚನವೇದ, ಸಂ.೧, ಪು.೪೫)*

## ದೇವಾಲಯ



ಕಣ್ಣಿಗೆ ಬಿತ್ತು ಎಂದರೆ, ಭಗವಂತನೇ ಜ್ಞಾಪಕಕ್ಕೆ ಬರುತ್ತಾನೆ. ಉದ್ದೀಪನವಾಗುತ್ತದೆ. ಎಲ್ಲಿ ಆತನ ಸಂಬಂಧವಾಗಿ ಮಾತುಕತೆ ನಡೆಯುವುದೋ, ಅಲ್ಲಿ ಆತನ ಆವಿರ್ಭಾವ ಆಗುತ್ತದೆ. ಎಲ್ಲಾ ತೀರ್ಥಗಳ ಪಾವಿತ್ರ್ಯತೆ ಅಲ್ಲಿ ನೆಲೆಗೊಳ್ಳುತ್ತದೆ. ಈ ವಿಧದ ಸ್ಥಳಗಳೆಲ್ಲಾ ಭಗವಂತನನ್ನೇ ಸ್ಮರಣೆಗೆ ತರುತ್ತವೆ. *(ವಚನವೇದ, ಸಂ.೧, ಪು.೧೮೭)*

**ಬ್ರಹ್ಮಜ್ಞಾನ** ಬೇಕಾಗಿದ್ದರೆ ಆ ಪ್ರತಿಬಿಂಬ ಸೂರ್ಯನನ್ನು ಹಿಡಿದುಕೊಂಡು ನಿಜವಾದ ಸೂರ್ಯನ ಕಡೆಗೆ ಹೋಗು. ನಮ್ಮ ಪ್ರಾರ್ಥನೆ ಕೇಳುತ್ತಾನಲ್ಲ ಆ ಸಗುಣಬ್ರಹ್ಮ ಆತನನ್ನೇ ಕೇಳಿಕೋ,



ಆತನೇ ಬ್ರಹ್ಮಜ್ಞಾನವನ್ನು ಕೊಡುತ್ತಾನೆ; ಹೇಗೆಂದರೆ ಯಾರು ಸಗುಣಬ್ರಹ್ಮನೋ ಆತನೇ ನಿರ್ಗುಣ ಬ್ರಹ್ಮ. ಯಾರು ಶಕ್ತಿಯೋ ಆತನೆ ಬ್ರಹ್ಮ. ಪೂರ್ಣ ಜ್ಞಾನ ದೊರೆತ ಮೇಲೆ ಈ ಅಭಿನ್ನತೆಯ ಅನುಭವ.

*(ವಚನವೇದ, ಸಂ.೨, ಪು.೧೧೮)*



**ಹನುಮಂತದು** ದಾಸ್ಯಭಾವ. ಆತ ರಾಮನಿಗೆ ಹೇಳಿದ: ''ಹೇ ರಾಮ, ಕೆಲವು ವೇಳೆ ನಾನು ಭಾವಿಸುತ್ತೇನೆ, ನೀನು ಪೂರ್ಣ, ನಾನು ಅಂಶ. ಇನ್ನು ಕೆಲವು ವೇಳೆ ಭಾವಿಸುತ್ತೇನೆ, ನೀನು ಪ್ರಭು ನಾನು ದಾಸ. ಆದರೆ ನನಗೆ ತತ್ತ್ವ ಜ್ಞಾನವುಂಟಾದಾಗ ಕಂಡುಬರುತ್ತದೆ, ನೀನೇ ನಾನು, ನಾನೇ ನೀನು.'' *(ವಚನವೇದ, ಸಂ.೧, ಪು.೩೭೨)*

*'ಶ್ರೀರಾಮಕೃಷ್ಣ ವಚನವೇದ'ದಿಂದ*